ಶ್ರೀ ಎಂ. ನಾರಾಯಣ ಸ್ವಾಮಿ:- ಇದೊಂದು ಪರಿಪಾಠವಾಗಿಬಿಟ್ಟಿದೆ. ನಮಗೂ ಅವಕಾಶ ಕೊಡಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಮ್ಮನ್ನು ಯಾವಾಗ ಕರೆಯುತ್ತೀರಿ?

ಉಪಾಧ್ಯಕ್ಷರು:- ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಲಾಗಿದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರೇ, ತಾವು ಪ್ರಸ್ತಾಪ ಮಾಡಿ. ವಿಷಯ ಮುಕ್ತಾಯ ಮಾಡಿದ ಮೇಲೆ ತಾವೇನು ಹೇಳುತ್ತೀರಿ. ಶ್ರೀಮತಿ ಪ್ರಮೀಳಾ ನೇಸರ್ಗಿಯವರನ್ನು ನಾನು ಕರೆದಿದ್ದೇನೆ ಅವರು ಪ್ರಸ್ತಾಪ ಮಾಡಲಿ. ಅವರೂ ಮುಗಿದ ಕೂಡಲೇ ತಮ್ಮನ್ನು ಕರೆಯುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಅ) ದೊಡ್ಡ ಬಳ್ಳಾಪುರದಲ್ಲಿ ಇನ್‌ಕಂಟ್ಯಾಕ್ಸ್ ಅಧಿಕಾರಿಗಳಿಗೆ ವರ್ತಕರಿಂದ ಅವಮಾನ.

+ಶ್ರೀಮತಿ ಪ್ರಮಿಳಾ ನೇಸರ್ಗಿ(ಚಾಮರಾಜಪೇಟೆ):- ನಿನ್ನೆ ದಿವಸ ದೊಡ್ಡಬಳ್ಳಾಪುರದಲ್ಲಿ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳು ಹೋಗಿ ವರ್ತಕರ ಮನೆಗೆ ಹೋದಂತಹ ಸಂದರ್ಭದಲ್ಲಿ ಹತ್ತು ಜನ ಹೆಣ್ಣು ಮಕ್ಕಳು ಕೂಡ ಜೊತೆಯಲ್ಲಿ ಹೋಗಿದ್ದರೆಂದು ಕೇಳಲ್ಪಟ್ಟಿದ್ದೇನೆ. ಹೋದ ನಂತರ ಅವರಿಗೆ ಅವಮಾನ ಮಾಡಿ ಹೊರಗೆ ಬರತಕ್ಕಂತಹ ಸಂದರ್ಭದಲ್ಲಿ ಅವರ ಮುಖದ ಮೇಲೆ ಉಗುಳಿರ-ತಕ್ಕಂತಹ ಪರಿಸ್ಥಿತಿಯನ್ನು ನಾವು ಓದಿದ್ದೇವೆ. ಬಹಳ ದುಃಖಕರವಾದ ವಿಷಯ. ಇವತ್ತು ಹೆಣ್ಣು ಮಕ್ಕಳು ಸರ್ಕಾರದಲ್ಲಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಅವರು ಕೆಲಸ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಅಧಿಕಾರಿಗಳ ಜೊತೆ ಇಂಥ ಸಂದರ್ಭದಲ್ಲಿ ಹೋದಾಗ ಇವರಿಗೆ ಈ ರೀತಿ ಅವಮಾನ ಮಾಡಿದಾಗ ಅಲ್ಲಿಯೇ ಪೋಲೀಸರು ಸಹ ಇದ್ದರು ಎಂದು ನಾನು ಕೇಳಿದ್ದೇನೆ. ನಮ್ಮಲ್ಲಿ ಕಾನೂನು ಮತ್ತು ಸುವ್ಯವಸ್ಥೆಯೇನಾದರೂ ಈ ರಾಜ್ಯದಲ್ಲಿದೆಯೇ ಎನ್ನುವ ಪ್ರಶ್ನೆಯನ್ನು ನಾನು ಇವತ್ತು ಮಾಡ-ಬೇಕಾಗಿದೆ. ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಲಾರದ ಪೋಲೀಸರು ಓಡಿಹೋದರು ಎಂದರೆ ಎಂಥ ಪೋಲೀಸರನ್ನು ನಾವು ರೆಕ್ರೂಟ್ ಮಾಡಿಕೊಂಡಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಆದಕಾರಣ ಸನ್ಮಾನ್ಯ ಸಂಬಂಧಪಟ್ಟ ಮಂತ್ರಿಗಳಲ್ಲಿ ಗೃಹ ಸಚಿವರಲ್ಲಿ ಹಾಗೂ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಷಯವನ್ನು ಇವತ್ತು ತಾವು ತಿಳಿಸಬೇಕಾಗಿದೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಹೆಣ್ಣು ಮಕ್ಕಳು ಅಧಿಕಾರಿಗಳಾಗಿದ್ದಾರೆ. ಅವರುಗಳು ಹೋಗಿ ಕೆಲಸ ಮಾಡುವ ಸಂದರ್ಭದಲ್ಲಿ ಅವ-ರಿಂದ ಆಭರಣವನ್ನು ಕಿತ್ತು ಕೊಂಡಿದ್ದಾರೆ. ಮೈಮೇಲೆ ಉಗುಳಿದ್ದಾರೆ. ಇದು ನಮಗೆ ಬಹಳ ದುಃಖ-ವಾಗುತ್ತದೆ. ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಎಂದು ಕೇಳಿದ್ದೇನೆ. ಹೆಣ್ಣುಮಕ್ಕಳಿಗೆ ರಕ್ಷಣೆ

ಕೊಡುವುದರಲ್ಲಿ ಸಂಪೂರ್ಣವಾಗಿ ಪೋಲೀಸರು ವಿಫಲರಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇದ್ದಾರೋ ಅವರ ಮೇಲೇನಾದರೂ ಕ್ರಮ ತೆಗೆದುಕೊಂಡಿದ್ದೀರೋ ಅಥವಾ ಅಧಿಕಾರಿಗಳ ಜೊತೆಯಲ್ಲಿ ಹೋಗಿದ್ದರಲ್ಲಾ, ಅವರಿಗೇನಾದರೂ ರಕ್ಷಣೆ ಕೊಡುವುದರಲ್ಲಿ ತಾವೇನಾದರೂ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರೋ? ಮತ್ತೊಮ್ಮೆ ಇಂಥ ಪರಿಸ್ಥಿತಿ ಮರುಕಳಿಸದ ಹಾಗೆ ತಾವೇನಾದರೂ ಕಾರ್ಯಕ್ರಮ ಹಾಕಿಕೊಂಡು ಇದರ ಬಗ್ಗೆ ಏನಾದರೂ ಸುತ್ತೋಲೆಯನ್ನು ಕೊಟ್ಟು ಪೋಲೀಸ್ ಅಧಿಕಾರಿಗಳನ್ನು ಬಂದೋಬಸ್ತ್ ಮಾಡುವ ಬಗ್ಗೆ ಇದರಲ್ಲೇನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೋ ಎಂದು ಈ ವಿಷಯದಲ್ಲಿ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಇದರ ಬಗ್ಗೆ ತಾವು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ, ಈಗ ಸ್ವಲ್ಪ ಹೊತ್ತಿನ ಕೆಳಗೆ ಗೊತ್ತಾಯಿತು. ಮಾನ್ಯ ಸದಸ್ಯಿಣಿಯವರು ಹೇಳಿದಹಾಗೆ ಅದರ ವಿವರಗಳನ್ನು ಯಾರು ತಪ್ಪಿತಸ್ಥರು, ಏನು, ಅದು ಅಧಿಕಾರಿಗಳ ತಪ್ಪೇ, ಟ್ಯಾಕ್ಸ್ ಇವೇಡ್ ಮಾಡಿರುವುದು ತಪ್ಪೇ, ಅದು ನನಗೆ ಗೊತ್ತಿಲ್ಲ. ಪೂರ್ಣ ವಿಷಯವನ್ನು ತರಿಸಿ ತಮಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು:- ಶ್ರೀ ಡಿ.ಆರ್. ಪಾಟೀಲ್, ತಾವು ಐದು ಜನ ಆರು ಜನ ಕೂಡಿ ಕೊಟ್ಟಿದ್ದೀರಿ, ಅದರಲ್ಲಿ ಯಾರಾದರೂ ಇಬ್ಬರು ಮಾತ್ರ ಮಾತನಾಡಿ.

(ಆ) ದೊಡ್ಡ ಜಿಲ್ಲೆಗಳ ಪುನರ್ ವಿಂಗಡಣೆ

+ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಉಪಾಧ್ಯಕ್ಷರೇ, 1973 ರಿಂದ ಮುಂಬೈ–ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿರುವ ದೊಡ್ಡ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡುವುದರ ಸಲುವಾಗಿ ಸರ್ಕಾರ. . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಇವರ ಪಕ್ಷದವರು ಬಹಿಷ್ಕಾರ ಹಾಕಿದ್ದಾರೆ. ಇವರು ಇಲ್ಲಿ ಮಾತನಾಡುತ್ತಿದ್ದಾರೆ. ಹೇಗೆ ಇದು?

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಬಹಿಷ್ಕಾರ ಹಾಕಿ ಹೊರಗೆ ಹೋಗಿ ಒಳಗೆ ಬಂದಿದ್ದೇವೆ. ಏನು ಬರಬಾರದೇ?

ಶ್ರೀ ಡಿ.ಆರ್. ಪಾಟೀಲ್:- ಉತ್ತರ ಕರ್ನಾಟಕದ ಜಿಲ್ಲೆ ಬಹಳ ದೊಡ್ಡ ಜಿಲ್ಲೆ. ಜನರ ಹಿತ ದೃಷ್ಟಿಯಿಂದ, ಆಡಳಿತ ಮತ್ತು ಆ ಜಿಲ್ಲೆಗಳ ಬೆಳವಣಿಗೆಯ ದೃಷ್ಟಿಯಿಂದ ಪುನರ್ ವಿಂಗಡಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ದೇವರಾಜ ಅರಸ್‌ರವರ ಕಾಲ 1973 ರಿಂದ ಹಿಡಿದು ಇಲ್ಲಿಯವರೆಗೆ ಅನೇಕ ಕಮೀಷನ್‌ಗಳನ್ನು ನೇಮಿಸಿದರು. 1975ರಲ್ಲಿ ವಾಸುದೇವರಾವ್ ಸಮಿತಿ ನೇಮಿಸಿ ಅದು ರಿಪೋರ್ಟ್ ಕೊಟ್ಟು ಆ ರಿಪೋರ್ಟ್ ಪ್ರಕಾರ ಗದಗ್ ಮತ್ತು ಸುರಪುರ ಎರಡು ಜಿಲ್ಲೆಗಳನ್ನು ಮಾಡಬೇಕೆಂದು ಹೇಳಿ ಆಯಿತು. ಮುಂದೆ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಹುಂಡೇ